## ಮಲಯಾಳಂ ಕಾವ್ಯಮಂಜರಿ



ಕನ್ನಡಕ್ಕೆ:
**ತೇರ್‌ಳಿ ಎನ್‌. ಶೇಖರ್**

ಕಲೆ: ಸೌಮ್ಯ ಪ್ರಭು ಕಲ್ಯಾಣಕರ್



**ಸಂಧ್ಯಾ ಇ.**
**ಪದ್ಯಗಳು**



# ಮದುವೆ ಆಗುವಾಗ

ಒಬ್ಬ ಕಳ್ಳನನ್ನು ಮದುವೆಯಾಗಬಹುದು
ಚೋರಕಲೆಯ
ಸೌಂದರ್ಯ ಶಾಸ್ತ್ರಗಳಲ್ಲಿ ಹೊಳೆವ
ಕಣ್ಣುಗಳ ಕಂಡು ಆನಂದಗೊಳ್ಳಬಹುದು
ಹೊಸ ಸ್ಥಳಗಳು, ಹೊಸ ರೀತಿಗಳು
ಎಂಬ ಅತ್ಯುತ್ಸಾಹದ ಕಥೆಗಳಲ್ಲಿ
ಮೈಮರೆಯಬಹುದು
ಕಾಣದ ತೀರವನ್ನು ಹುಡುಕುವವನ
ದಾರಿಗಳಲ್ಲಿ ಪ್ರಯಾಣಿಸಬಹುದು
ಕತ್ತಲೆಯ ಮನೋಹಾರಿಯಲ್ಲಿ ಮನವನ್ನು
ಮೋಡಿಮಾಡಬಹುದು
ರಾತ್ರಿಯ ನಿಗೂಢತೆಗಳನ್ನು
ಎದೆತುಂಬಿಕೊಳ್ಳಬಹುದು
ಅದೃಶ್ಯವಾಗುವುದರ
ಇಂದ್ರಜಾಲಗಳಲ್ಲಿ ಬೆರಗಾಗಬಹುದು
ಸುಳಿವು ನೀಡದಿರುವುದರ
ಅಟ್ಟಹಾಸಗಳಲ್ಲಿ ಭಾಗಿಗಳಾಗಬಹುದು.

ಒಬ್ಬ ಕೊಲೆಪಾತಕಿಯನ್ನು
ಮದುವೆಯಾಗಬಹುದು
ಅತ್ಯಂತ ಸೂಕ್ಷ್ಮತೆಯಲ್ಲಿ
ಪ್ರೇಮಿಸಲ್ಪಡುವುದರ
ಅತ್ಯುತ್ತಮ
ಅವಕಾಶವನ್ನು ಉಪಯೋಗಿಸುವುದರ
ಮಜಾ ಸವಿಯಬಹುದು
ಅಂಬೆಗಾಲಿನ ಚಲನೆಗಳು,
ಕುಡಿಗಣ್ಣಿನ ಅಲುಗಾಟಗಳು
ಉರುಹೊಡೆವ ನುಡಿಗಳು,
ಮೌನದ ಮಧ್ಯಂತರಗಳು
ಎಲ್ಲವೂ ಅವನು ಒಟ್ಟುಗೂಡಿಸಿ
ಎತ್ತಿಟ್ಟುಕೊಳ್ಳುತ್ತಾನೆ
ನೆನಪಿಟ್ಟುಕೊಂಡು ಯಾವಾಗಲೂ
ಪ್ರಣಯ ಖಡ್ಗದ ಅಲಗನ್ನು
ಮಸೆಯುತ್ತ
ಮಿನುಗಿಸುತ್ತಾನೆ.